ಇ) ಮುಲ್ಕಿ ಕೈಗಾರಿಕಾ ಕೇಂದ್ರದಲ್ಲಿ ರಸ್ತೆ ವಿದ್ಯುಚ್ಛಕ್ತಿ ಲೈನ್ ಮತ್ತು ನೀರು ಸರಬರಾಜಿನ ವ್ಯವಸ್ಥೆಗಳನ್ನು ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವರು ಈಗಾಗಲೇ ಕೈಗೊಂಡಿರುತ್ತಾರೆ. ದಿನಾಂಕ 1-10-90 ರಿಂದ ವಲಯ-2ಕ್ಕೆ ಅನ್ವಯವಾಗುವ ರೂ.15.00 ಲಕ್ಷಗಳಿಗೆ ಮೀರದಂತೆ ಬಂಡವಾಳ ಹೂಡಿಕೆ ಘಟಕಗಳಿಗೆ ಶೇ 15ರಷ್ಟು ಸಹಾಯಧನ, 3 ವರ್ಷಗಳವರೆಗೆ ಮಾರಾಟ ವಿನಾಯಿತಿ ಮತ್ತು ಸ್ಟ್ಯಾಂಪ್ ಶುಲ್ಕ ವಿನಾಯಿತಿ ಹಾಗೂ ಇತರೆ ಸೌಲಭ್ಯಗಳನ್ನು ನೀಡಲಾಗುತ್ತಿದೆ.

ಕಾವೇರಿ ನೀರಿನ ಹಂಚಿಕೆ

15 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಮಿಳುನಾಡಿಗೆ ಕಾವೇರಿ ನೀರು ಕೊಟು ನಮ್ಮ ರಾಜ್ಯಕ್ಕೆ ಆಲ್ಲಿಂದ ವಿದ್ಯುಚ್ಛಕ್ತಿ ಪಡೆದುಕೊಳ್ಳುವ ಬಗ್ಗೆ ನಮ್ಮ ಸರ್ಕಾರದವರು ತಮಿಳುನಾಡು ಸರ್ಕಾರದವರೊಡನೆ ಇತ್ತೀಚೆಗೆ ಕರಾರು ಮಾಡಿಕೊಂಡಿದ್ದಾರೆಯೇ?

ಆ) ಹಾಗಿದ್ದಲ್ಲಿ ಈ ಕರಾರಿನ ವಿವರಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಡಿ. ದೇವರಾಜ ಅರಸು ನಾಲೆಗೆ ಬೇಸಿಗೆಯಲ್ಲಿ ಒದಗಿಸುವ ನೀರಿನ ಪ್ರಮಾಣ;

1107 - ಶ್ರೀ ಎಂ. ತಮ್ಮಣ್ಣ (ಕೆರೆಗೂಡು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?;

ಅ) ಡಿ. ದೇವರಾಜ ಅರಸು ನಾಲೆಗೆ ಬೇಸಿಗೆ ನೀರಾವರಿ ಕಾರ್ಯಕ್ರಮ ಇದೆಯೇ?

ಆ) ಹಾಗಿದ್ದಲ್ಲಿ ಆ ನಾಲೆಗೆ ಒದಗಿಸುವ ನೀರಿನ ಪ್ರಮಾಣವೆಷು?

ಇ) ಡಿ. ದೇವರಾಜ ಅರಸು ನಾಲೆಗೆ ನೀರು ಬಿಟ್ಟ ನಂತರ ಕೃಷ್ಣರಾಜಸಾಗರ ಜಲಾಶಯದ ಆಚ್ಚುಕಟ್ಟು ಪ್ರದೇಶಕ್ಕೆ ಒದಗಿಸುವ ನೀರಿನ ಪ್ರಮಾಣದಲ್ಲಿ ವ್ಯತ್ಯಾಸವಾಗುವುದಿಲ್ಲವೇ?

ಈ) ಕೃಷ್ಣ ರಾಜಸಾಗರದ ವಿ.ಸಿ.ನಾಲೆ ಶಿಂಷಾ ನಾಲೆ ಆಧುನೀಕರಣ ಮತ್ತು ಸಂಪರ್ಕನಾಲೆ 90-91ನೇ ಸಾಲಿಗೆ ಎಷು ಹಣವನ್ನು ಒದಗಿಸಲಾಗಿದೆ?

ಉ) ಈ ಯೋಜನೆ ಮುಗಿಸಲು ಎಷ್ಟು ವರ್ಷಗಳು ಬೇಕಾಗುತ್ತದೆ?

ಊ) ಈ ಆಧುನೀಕರಣ ಯೋಜನೆಯಿಂದ ವಿಶ್ವೇಶ್ವರಯ್ಯ ನಾಲಾ ಆಚ್ಚುಕಟ್ಟು ಪ್ರದೇಶಕ್ಕೆ ಎಷು ಹಿಡುವರಿ ನೀರು ಸಿಗುತ್ತದೆ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಇಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) 1990-91ನೇ ಸಾಲಿನಲ್ಲಿ ಆಯವ್ಯಯದ ಪ್ರಕಾರ ಕೃಷ್ಣರಾಜಸಾಗರ ಆಧುನೀಕರಣಕ್ಕೆ ಮಾತ್ರ 100.00 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

ಉ) ಈ ಯೋಜನೆಯನ್ನು 9ನೇ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಮುಗಿಸುವ ಸಾಧ್ಯತೆ ಇದೆ.